ಸರಿ, ಇಂದು ನಾನು ನಿನ್ನನ್ನು ಕೊಲ್ಲುತ್ತೇನೆ'.

ತಣ್ಣನೆ, ಸ್ಪಷ್ಟವಾಗಿ, ಶಾಂತತೆಯಿಂದ ಬಂದ ಮಾತಿನ ಧ್ವನಿಯಲ್ಲಿ, ಸ್ವಲ್ಪವೂ ಹಿಂಜರಿಕೆಯಿರಲಿಲ್ಲ, ಬದಲಾಗಿ ದೃಢಸಂಕಲ್ಪವಿತ್ತು.

ದಿಟ್ಟವಾಗಿ ಕಾಲೂರಿ ನಿಂತ ನಿಲುವು, ಸ್ಥಿರವಾಗಿ ಕೋವಿ ಗುರಿ ಹಿಡಿದಿದ್ದ ಕೈಗಳು, ಬೆಂಕಿ ಕಾರುವ ಕಣ್ಣುಗಳು, ಅದೇನಾಯಿತೋ ಏನೋ ಗಣಪತಿ ತನ್ನ ಪಿಸ್ತೂಲು ಹಿಡಿದ ಕೈಗಳನ್ನು ಕೆಳಗಿಳಿಸಿ ಅವಳನ್ನೇ ನೋಡುತ್ತಾ ನಿಂತುಬಿಟ್ಟ. ಗಣಪತಿಯನ್ನು ಬಲ್ಲ ಎಲ್ಲರಿಗೂ ಗೊತ್ತು, ಖಂಡಿತವಾಗಿಯೂ ಅದು ಭಯದಿಂದ ಅಲ್ಲ ಎಂದು. ಅದು ಒಂದು ವಿಚಿತ್ರ ಪ್ರತಿಕ್ರಿಯೆಯಾಗಿತ್ತು. ಅದೇನೆಂದು ಅವನಿಗೆ ಮಾತ್ರ ಗೊತ್ತಿತ್ತು.

ಗಣಪತಿ ಸುಮಾರು ಐದನೇ ಕ್ಲಾಸಿನಲ್ಲಿ ಓದುತ್ತಿದ್ದ ಹುಡುಗನಿರಬಹುದು. ಶಾಲೆಯಿಂದ ಮನೆಗೆ ಅಮ್ಮುವನ್ನು ಜೋರಾಗಿ ಕರೆಯುತ್ತಾ ಬಂದಾಗ, ಬಾಗಿಲನ್ನು ತೆರೆದ ತಾಯಿಗೆ ಕಂಡದ್ದು ಇತ್ತ ಮಗ, ಅತ್ತ ಸಾಕಷ್ಟು ದೂರದಲ್ಲಿ ಹೊಂಚುಹಾಕಿ ಕುಂತಿದ್ದ ಹುಲಿ. ಗಣಪತಿಯ ತಾಯಿ ಸ್ವಲ್ಪವೂ ಅಳುಕದೆ, ಮತ್ತೆ ಮನೆ ಒಳಕ್ಕೆ ನುಗ್ಗಿ ಗೋಡೆಗೆ ನೇತುಹಾಕಿದ್ದ ಕೋವಿಯನ್ನು ಹಿಡಿದು ಹೊಸ್ತಿಲಿಗೆ ಬಂದು ನೇರವಾಗಿ ಹುಲಿಯ ಮುಖಕ್ಕೆ ಗುರಿ ಇಟ್ಟಿದ್ದಳು. ಮಗ ಹುಲಿಯನ್ನು ಬಿಟ್ಟು ತಾಯಿಯನ್ನು ನೋಡುತ್ತಾ ನಿಂತ, ಅಂದು ಅಮ್ಮುವಿನಲ್ಲಿ ಕಂಡ ಅದೇ ದಿಟ್ಟತೆ, ದೃಢತೆ, ಬೆಂಕಿಯುಂಡೆಯಂತಹ ಕಣ್ಣುಗಳು. ಬಹುಶಃ ಹುಲಿಯು ಸಹ ಆ ರೌದ್ರತೆಯನ್ನು ಎಂದೂ ನೋಡಿರಲಾರದೇನೋ... ಸದ್ದಿಲ್ಲದೆ ಮೆಲ್ಲಗೆ ಹಿಂದಕ್ಕೆ ತಿರುಗಿ ಪೊದೆಗಳ ಹಿಂದೆ ಮರೆಯಾಗಿತ್ತು. ಅಂದು ಗಣಪತಿಗೆ ಮಂಟಪದ ಮೇಲೆ ಕೋವಿ ಹಿಡಿದು ನಿಂತ ಅಮ್ಮು ತನ್ನ ತಾಯಿಯನ್ನು ಜ್ಞಾಪಕಕ್ಕೆ ತಂದಿದ್ದಳು. ಹಾಗೇ ಎವೆಯಿಕ್ಕದೆ ಸಾಕ್ಷಾತ್ ದುರ್ಗೆಯನ್ನೇ ಕಂಡಂತೆ ಗಣಪತಿ ಅಮ್ಮುವನ್ನು ನೋಡುತ್ತಾ ನಿಂತೇ ಬಿಟ್ಟಿದ್ದ. ಅಮ್ಮು ಮತ್ತು ಚಂದ್ರನ್ ಇದು ಇಲ್ಲಿಗೆ ಮುಗಿಯಿತು ಎಂಬಂತೆ ಅಲ್ಲಿಂದ ಹೊರಟ ಮೇಲೆ, ಅಲ್ಲಿದ್ದವರು ಕೂಡ ಅವರವರಿಗೆ ತೋಚಿದಂತೆ ಅರ್ಥಮಾಡಿಕೊಂಡು ಹೋಗಿದ್ದರು. ಗಣಪತಿ ಮಾತ್ರ ಹಾಗೇ ಅಲ್ಲೇ ನಿಂತಿದ್ದ.

ಇದು ಅಂದು ಪುತ್ತರಿ ಹಬ್ಬದ ಹಿಂದಿನ ದಿನ ಮಂಟಪದ ಮೇಲೆ ನಡೆದ ಘಟನೆ. ಇಂದು ಅದೇ ಮಂಟಪದ ಮೇಲೆ ಕುಳಿತಿದ್ದ ಮಾಯಣ್ಣನ ತಂಡ, ಆಯ್ಕೆ ಇದ್ದಿದ್ದರೆ ಅದೆಷ್ಟು ಹೊತ್ತು ಅಲ್ಲೇ ಕುಳಿತುಬಿಡುತ್ತಿದ್ದರೋ, ಏನೂ ವಿಧಿಯಿಲ್ಲದೆ, ಮೇಲೆದ್ದು ಕಾಲೆಳೆಯುತ್ತಾ ನಂತರದ ಕೆಲಸಕ್ಕೆ ಮುಂದಾದರು.

'ಬೆಂಗಳೂರಿನಿಂದ ಫೋನ್ ಬಂದಿತ್ತಾ ವಿನಯ್?'

'ಬಂದಿತ್ತು ಸಾರ್... ಜಯಂತ್ ಇನ್ನೂ ಟ್ರೇಸ್ ಆಗಿಲ್ಲ... ಅವರ ಫೋನು ಇನ್ನೂ ಸ್ವಿಚ್ ಆಫ್‌ನಲ್ಲೇ ಇದೆ. ಡೈರೆಕ್ಟರ್ ದಿನೇಶ್, ಮನೆಯಿಂದ ಹೊರಗೆ ಕಾಲೇ ಇಟ್ಟಿಲ್ಲ. ಸಿದ್ಧರಾಜು ಸುಮ್ಮನೆ ಬೇರೆ ಬೇರೆ ನಂಬರ್‌ಗಳಿಂದ ಫೋನ್ ಮಾಡಿದ್ದಾರೆ, ಪಿಕ್ ಮಾಡಿಲ್ವಂತೆ'.

'ಹೌದೇನು...'

'ಏನು ತೊಂದರೆ ಇಲ್ಲ ಸಾರ್... ಅಲ್ಲಿ ನಮ್ಮ ನಿಗಾವಣೆ ಬಿಗಿಯಾಗಿದೆ'.

'ಅವರು ಪೂರ್ತಿ ಅಲರ್ಟ್ ಆಗೋದಕ್ಕೆ ಮುಂಚೆ ವಿ ಶುಡ್ ಆ್ಯಕ್ಟ್... ವಿನಯ್ ನೆನಪಿರಲಿ, ಯಾರನ್ನೂ ಅವಗಣನೆ ಮಾಡಬಾರದು. ಒಬ್ಬೊಬ್ಬರೂ ಚಾಣಾಕ್ಷರು. ಭುಜಂಗ, ಕಾರು ಚಂದ್ರನ್ ಮನೆ ಕಡೆ ತಿರುಗ್ಸಿ'.

'ಯೆಸ್ ಸಾರ್'.

ಭುಜಂಗನೊಂದಿಗೆ ಕಾರನ್ನು ಸಾಕಷ್ಟು ದೂರದಲ್ಲೇ ನಿಲ್ಲಿಸಿ, ಮುಫ್ತಿಯಲ್ಲಿದ್ದ ಮಾಯಣ್ಣ ಮತ್ತು ವಿನಯ್ ಮಾತ್ರ ಚಂದ್ರನ್ ಮನೆಗೆ ಹೋಗಿ ಕದ ತಟ್ಟಲು, ಸುಮಾರು ನಲವತ್ತು ನಲವತ್ತೈದರ ಹೆಂಗಸು ಬಾಗಿಲು ತೆರೆದು, ಪರಿಚಯದವರಂತೆ ಕರೆದು ಒಳಗೆ ಕುಳ್ಳಿರಿಸಿದರು. ಚಂದ್ರನ್ ಮನೆಯಲ್ಲಿ ಇದ್ದಂತೆ ಕಾಣಲಿಲ್ಲ.

'ಚಂದ್ರನ್ ಎಷ್ಟು ಗಂಟೆಗೆ ಬರ್ತಾರೆ?'

'ಅವರಿಗೆ ಒಂದು ಅರ್ಜೆಂಟ್ ಕೆಲಸ ಬಿತ್ತು. ಬರೋದು ತುಂಬಾ ತಡ ಆಗುತ್ತೆ. ಕಾಫಿ ಆಗಬಹುದಾ?'

'ಆಗಬಹುದು. ನಿಮ್ಮ ಹೆಸರು?'

'ಮಂಜರಿ ಅಮ್ಮಾಳ್... ವಿಜೇತ್ ನನ್ನ ಮಗ... ನೀವು ಬರ್ತಿರಾ ಅಂತ ಚಂದ್ರನ್ ಹೇಳಿದ್ದರು'.

'ನಿಮ್ಮ ಯಜಮಾನರು ಎಲ್ಲಿಗೆ ಹೋದರು?'

'ಪುತ್ತೂರಿನಲ್ಲಿ ಒಂದು ಜ್ಯುವೆಲ್ಲರಿ ಶಾಪಿಗೆ ಹೋಗಿದ್ದಾರೆ, ಅದು ಅವರ ಸ್ನೇಹಿತರದೇ ಅಂಗಡಿ. ಎಲ್ಲಾ ಸೇರಿ, ವೆಡ್ಡಿಂಗ್ ಜ್ಯುವೆಲ್ಸ್ ಒಂದು ಐದು ಲಕ್ಷ ಆದರೂ ಆಗುತ್ತೆ ಅಂತಿದ್ದರು... ವಿಜೇತ್ ಬೆಂಗಳೂರಲ್ಲಿ ಅವನ ಸ್ವಂತ ಬಿಸಿನೆಸ್ ಸೆಟ್ ಮಾಡೋಕ್ಕೆ ಹನ್ನೆರಡು ಲಕ್ಷ ಖರ್ಚಾಯ್ತು ನೋಡಿ. ಮೇಲೆ ಮದುವೆಯ ಬೇರೆ ಖರ್ಚು ಕೂಡ ಇದ್ದೇ ಇರುತ್ತೆ. ಆದ್ದರಿಂದ ನಮಗೆ ಸ್ವಲ್ಪ ಟೈಮ್ ಬೇಕಾಗುತ್ತೆ. ದಯವಿಟ್ಟು ಅರ್ಜೆಂಟ್ ಮಾಡಬೇಡಿ'.

ಮಾಯಣ್ಣನಿಗೆ ಇಲ್ಲಿ ಏನೋ ಗೊಂದಲ ಆಗಿದೆ ಎನ್ನಿಸಿತು, ಆದರೂ ಸುಮ್ಮನೆ ಕೇಳುತ್ತಾ ಕೂತ.

'ನಮ್ಮ ನಿಮ್ಮ ಭಾಷೆ, ಕ್ಲಾಸ್ಸ್ ಎಲ್ಲಾ ಬೇರೆ ಬೇರೆ. ಏನು ಮಾಡೋದು. ವಿಜೇತ್ ಮತ್ತು ದಿವ್ಯಾ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದಾರೆ, ನಾವು ಮದುವೆ ಮಾಡಿಕೊಡಬೇಕಷ್ಟೆ. ಆಮೇಲೆ ಅವರಿಬ್ಬರೂ ಬೆಂಗಳೂರಲ್ಲಿ ಸುಖವಾಗಿ ಇರ್ತಾರೆ'.

ಈಗಲೂ ಈ ಗೊಂದಲಕ್ಕೆ ತೆರೆ ಎಳೆಯದಿದ್ದರೆ ತಪ್ಪು ಎಂದು ಅರಿತ ಮಾಯಣ್ಣ–

'ನಾವು ಯಾರು ಅಂತ ತಿಳಿದಿರಿ?'

'ನೀವು ನಮ್ಮ ಹುಡುಗ ವಿಜೇತ್ ಮದುವೆ ಆಗಬೇಕೆಂದಿರುವ ದಿವ್ಯಾಗೆ ಚಿಕ್ಕಪ್ಪ ಅಲ್ವಾ?'

'ಇಲ್ಲ. ನಾವು ಅಮ್ಮು ಅವರ ಕೊಲೆಯ ಬಗ್ಗೆ ಮಾತಾಡೋದಕ್ಕೆ ಬಂದಿರೋ ಬೆಂಗಳೂರಿನ ಪೊಲೀಸರು'.

'ಹೌದಾ?'

ಒಂದು ದೀರ್ಘ, ಗಾಢ ಮೌನ, ನಂತರ ಮುಂದುವರಿದು–

'ಸಾರಿ, ಕನ್‌ಫ್ಯೂಸ್ ಮಾಡಿಕೊಂಡುಬಿಟ್ಟೆ. ಲಾಸ್ಟ್ ವೀಕ್ ದಿವ್ಯಾ ಅವರ ತಂದೆ ಬಂದಿದ್ದರು. ಇವತ್ತು ಇದೇ ಟೈಮಿಗೆ, ನಿಮ್ಮ ಮನೆ ನೋಡೋದಕ್ಕೆ ನನ್ನ ತಮ್ಮಂದಿರು ಬರ್ತಾರೆ ಅಂತ ಹೇಳಿದ್ದರು. ಅವರೇ ನೀವು ಅಂತ ಮಿಸ್ಟೇಕ್ ಮಾಡಿಕೊಂಡುಬಿಟ್ಟೆ'.

'ಪರವಾಗಿಲ್ಲ ಬಿಡಿ... ಚಂದ್ರನ್ ಅವರು ಬಂದ ತಕ್ಷಣ ಫೋನ್ ಮಾಡಿಸಿ'.

ಯಾಕೋ ಮಾಯಣ್ಣನಿಗೆ ಯಾವ ಕೆಲಸವೂ ಕೈಗೂಡಿ ಬರುತ್ತಿರಲಿಲ್ಲ. ತನ್ನ ನಿರಾಶೆಯನ್ನು ತೋರ್ಪಡಿಸದೆ ಮಡಿಕೇರಿ ಠಾಣೆಗೆ ಹಿಂತಿರುಗಿ ಬಂದ. ಠಾಣೆಯಲ್ಲಿ ಮೂರು ಜನ ಪೇಸಿಗಳನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಪೂವಯ್ಯ ಇನ್ನಾವುದೋ ಕೆಲಸದ ಮೇಲೆ ಹೋಗಿದ್ದ. ಕುರ್ಚಿಯಲ್ಲಿ ಕುಸಿದು ಕೂತ ಮಾಯಣ್ಣನಿಗೆ ಅದ್ಯಾವ ಮಾಯದಲ್ಲಿ ನಿದ್ದೆ ಆವರಿಸಿತ್ತೋ, ಮತ್ತೆ ಎದ್ದಾಗ ಸಮಯ ಮುಸ್ಸಂಜೆ ಏಳಾಗಿತ್ತು. ಆಗ ತಾನೆ ಠಾಣೆಗೆ ಬಂದಿದ್ದ ಪೂವಯ್ಯನಿಗೆ ಆತ್ಮೀಯ ವಿದಾಯ ಹೇಳಿ, ಅವನು ತರಿಸಿದ್ದ ಕೇಕ್, ಬಿಸ್ಕೆಟ್ಸ್, ಕಾಫಿ ಎಲ್ಲಾ ಮುಗಿಸಿ, ವಿನಯ್ ಮತ್ತು ಭುಜಂಗನ ಜೊತೆ ಬೆಂಗಳೂರಿನ ಕಡೆ ಪ್ರಯಾಣ ಬೆಳೆಸಿದ್ದ.

ಕಾರು ಪಿರಿಯಾಪಟ್ಟಣ ದಾಟಿ ಹುಣಸೂರಿಗೆ ಬರುತ್ತಿದ್ದಂತೆ ಸೌಜನ್ಯಳ ಫೋನ್ ಕರೆಯುತ್ತಿತ್ತು. ಕಾರಿನಲ್ಲೇ ಕೂತು ಕರೆಯನ್ನು ಸ್ವೀಕರಿಸುವಂತಿರಲಿಲ್ಲ. ಭುಜಂಗನಿಗೆ ಕಾರು ಪಕ್ಕಕ್ಕೆ ಹಾಕುವುದಕ್ಕೆ ಹೇಳಿ, ಕೆಳಗಿಳಿದು, ಹೊರನಡೆದ ಮಾಯಣ್ಣ, ತಾನೇ ಫೋನ್ ಮಾಡಿದ.

'ರೀ...'

'...'

'ಯಾಕೆ ಮಾತಾಡ್ತಾ ಇಲ್ಲ. ಕೇಳುಸ್ತಾ ಇಲ್ವಾ. ಸ್ಪೀಕರ್ ಹಾಕಿ'.

'ಕೇಳುಸ್ತಾ ಇದೆ ಹೇಳು. ನಿನ್ನ ಸ್ಪೀಕರ್‌ಗೆ ಹಾಕುದ್ರೆ, ಫೋನು ಲೌಡ್ ಸ್ಪೀಕರ್ ಆಗೋಗುತ್ತೆ'.

'ಬೆಳಗ್ಗೆಯಿಂದ ಔಟ್ ಆಫ್ ರೀಚ್ ಬರ್ತಾ ಇತ್ತು, ಯಾವ್ ಕೊಂಪೆಗೋಗಿದ್ರಿ?'

'ಕೊಂಪೆಗಲ್ವೇ ಕೊಡಗಿಗೋಗಿದ್ದೆ... ಹೌದು, ನಿನಗೆ ಸೌಜನ್ಯ ಅಂತ ಹೆಸರು ಇಕ್ಕಿದ್ದು ಯಾರು?'

'ಅದು ಜಾತಕದಲ್ಲಿ ಹೆಸರು 'ಸೌ'ಯಿಂದನೇ ಬರಬೇಕು ಅಂತ ಬಂತು, ನಮ್ಮಮ್ಮ ಸೌಮ್ಯ ಅಂತ, ನಮ್ಮಪ್ಪ ಸೌಜನ್ಯ ಅಂತ, ಕೊನೆಗೆ ಸೌಜನ್ಯ ಅಂತಾನೆ ಆಯ್ತು'.

'ಬರಿ ಸೌ ಅಂತ ಇಕ್ಕಿದ್ರೆ ಆಗಿತ್ತೇನೊ'.

'ಅದಿರ್ಲಿ, ಬರ್ತಾ ಕಾಫಿ ಬೀಜ, ಯಾಲಕ್ಕಿ, ಮೆಣಸು ಎಲ್ಲಾ ತನ್ನೀ'.

'ನಾನು ಅಲ್ಲೋಗಿದ್ದು ಶಾಪಿಂಗ್ ಮಾಡಕ್ಕಲ್ಲ'.

'ನಿಮಗಿನ್ನೊಂದೇಳದೇ ಮರತೋಯ್ತು'.

'ಪರವಾಗಿಲ್ಲ ಬಿಡು'.

'ಅದೇ ಅಕ್ಟೋಬರ್ ಎರಡಕ್ಕೆ ಏನ್ ಜಯಂತಿ ಯೇಳಿ ನೋಡೋಣ'.

'ಗಾಂಧಿ ಜಯಂತಿ'.

'ಅವತ್ತೇನೆ ಇನ್ನೊಂದು ಜಯಂತಿ ಐತೆ ಯೇಳಿ ನೋಡೋಣ'.

'ಶಾಸ್ತ್ರೀ ಜಯಂತಿ'.

'ಅವತ್ತೇ ಇನ್ನೊಂದು ಜಯಂತಿ ಐತೆ ಯೇಳಿ ನೋಡೋಣ'.

'ಗೊತ್ತಿಲ್ವಲ್ಲ...'